1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.98/2023

PW- 06

CW- 17

ಪ್ರ. ಬೋ. ದಿನಾಂಕಃ 10-09-2024

ಹೆಸರು ಶ್ರೀ/ ಶ್ರೀಮತಿ : ಶ್ವೇತಾ ಆರ್

ತಂದೆ/ ಗಂಡನ ಹೆಸರು : ಡೆವಿಡ್ ಡ್ಯಾನಿಯಲ್

ವಯಸ್ಸು : 37 ವರ್ಷ

ಉದ್ಯೋಗ : ಸ್ಟಾಫ್ ನರ್ಸ್, ಹರಿಹರ ಸರ್ಕಾರಿ ಆಸ್ಪತ್ರೆ ,

ವಾಸ : ಹರಿಹರ .

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನಾನು ಕಳೆದ 14 ವರ್ಷದಿಂದ ಹರಿಹರದ ಸರ್ಕಾರಿ ಆಸ್ಪತ್ರೆಯಲ್ಲಿ ಸ್ಟಾಫ್ ನರ್ಸ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ಚಾಸಾ-16 ನಮ್ಮ ಆಸ್ಪತ್ರೆಯ ವೈದ್ಯರು. ಚಾಸಾ-18 ರಿಂದ 24 ನಮ್ಮ ಆಸ್ಪತ್ರೆಯ ಸಹ ಸಿಬ್ಬಂದಿಗಳು. ಮೃತ ಕುಮಾರ ಗೊತ್ತು. ಚಾಸಾ-12 ನನಗೆ ಗೊತ್ತು. ಚಾಸಾ-1 ಗೊತ್ತು.

ದಿ.14-05-2023 ರಂದು ರಾತ್ರಿ 10-45 ಗಂಟೆ ಸಮಯದಲ್ಲಿ ನಾನು ಹೆರಿಗೆ ರೂಮಿನ ಕೆಲಸ ಮುಗಿಸಿ , ಊಟಕ್ಕೆಂದು ಕ್ಯಾಸುಯಲ್ಟಿ ಹತ್ತಿರ ಬಂದೆ. ಆ ದಿನ ಚಾಸಾ-16 ವೈದ್ಯರು ಕೆಲಸದಲ್ಲಿದ್ದರು. ಅದೇ ಪ್ರಕಾರ ಪದ್ಮಜಾ ಮತ್ತು ವಿರೇಂದ್ರ, ದೀಪಾ, ಅನುಸುಯಮ್ಮ, ಸುಮಂಗಳ ಇದ್ದರು. ಸದರಿಯವರು ಬಂದ ರೋಗಿಗಳನ್ನು ನೋಡಿಕೊಳ್ಳುತ್ತಿದ್ದರು. ಆ ಸಮಯದಲ್ಲಿ ವಿ.ಸಿ.ಯಲ್ಲಿರುವ ರಾಜು ಮತ್ತು ಮಾರುತಿ ಇವರು ಗಲಾಟೆಯಾಗಿದ್ದರ ಬಗ್ಗೆ ಬಂದು ಎಂ ಎಲ್ ಸಿ ಮಾಡಿಸುತ್ತಿದ್ದರು. ಆ ಸಮಯದಲ್ಲಿ ನಾವು ಓ ಪಿ ಡಿ ಯಲ್ಲಿದ್ದೇವು. ಆ ಸಮಯದಲ್ಲಿ ಚಾಸಾ-16 ವೈದರು ಎಂ ಎಲ್ ಸಿ

ಮಾಡುತ್ತಿದ್ದರು.

ಆ ಸಮಯದಲ್ಲಿ ಆಟೋದಿಂದ ಮೂರು ಜನರು ಬಂದರು. ಅವರ ಹೆಸರು ಕುಮಾರ , ಅವರ ಹೆಂಡತಿ ಮತ್ತು ಫಕ್ಕಿರಪ್ಪ ಒಳಗಡೆ ಕ್ಯಾಸುಯಲ್ಟಿ ಹತ್ತಿರ ಬಂದರು. ಆ ಸಮಯದಲ್ಲಿ ಆರೋಪಿ 1 ಮತ್ತು 2 ಇವರು ಬಂದು ಕುಮಾರ ಮತ್ತು ಅವರ ಹೆಂಡತಿ ಮತ್ತು ಫಕ್ಕಿರಪ್ಪ ಇವರ ಜೊತೆ ಹೊಡೆದಾಡಲು ಬಂದರು. 1 ನೇ ಆರೋಪಿ ಚಾಕು ತೆಗೆದುಕೊಂಡು ಕುಮಾರ್ ಇವರ ಕುತ್ತಿಗೆಗೆ ಹಾಕಿದ. ಅದರಿಂದ ರಕ್ತ ಸೋರುತ್ತಿದ್ದು , ಆತ ಕುಸಿದು ಮಕಾಡೆಯಾಗಿ ಬಿದ್ದ , ಫಕ್ಕಿರಪ್ಪ ಇವರ ಎಡಗಡೆ ಬೆನ್ನಿಗೆ ಚಾಕುವಿನಿಂದ ಗಾಯವಾಗಿತ್ತು. ಅವರಿಗೆ 1 ನೇ ಆರೋಪಿ ಹೊಡೆದಿರುತ್ತಾರೆ. ತಕ್ಷಣ ಅವರಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ , ಅಂಬುಲನ್ಸ ಮುಖಾಂತರ ವಿರೇಂದ್ರ ಮತ್ತು ನಾಗರಾಜ್ ಇವರ ಮುಖಾಂತರ ದಾವಣಗೆರೆ ಸಿಜಿ ಆಸ್ಪತ್ರೆಗೆ ಕಳುಹಿಸಿಕೊಟ್ಟೆವು.

ಸದರಿಯವರು ಆಸ್ಪತ್ರೆ ಸೇರಿಸಿ ವಾಪಸ್ ಬಂದ ನಂತರ ನಮಗೆ ಹೋಗುತ್ತಿರುವಾಗ ಮರಣಹೊಂದಿರುತ್ತಾರೆ ಎಂದು ತಿಳಿಸಿದರು. ಚಾಕು ಹಾಕಿದ್ದರಿಂದ ಅವರು ಮರಣಹೊಂದಿರುತ್ತಾರೆ ಎಂದು ಗೊತ್ತಾಯಿತು.

ಆರೋಪಿತರ ತಂದೆಗೆ ಇಬ್ಬರು ಹೆಂಡತಿಯರು ಇದ್ದು , ಆಸ್ತಿ ವಿಚಾರವಾಗಿ ಗಲಾಟೆ ಮಾಡಿಕೊಂಡು ಆಸ್ಪತ್ರೆಗೆ ಬಂದಿತ್ತಾರೆ ಎಂದು ನಂತರ ನಮಗೆ ಗೊತ್ತಾಯಿತು.

ನಂತರ ನಾವು ಹರಿಹರ ಪೊಲೀಸ್ ಠಾಣೆಗೆ ಹೋದೆವು, ಅಲ್ಲಿ ಪೊಲೀಸರು ನಮ್ಮ ವಿಚಾರಣೆ ಮಾಡಿ, ನ್ಯಾಯಾಲಯಕ್ಕೆ ಕರೆದುಕೊಂಡು ಹೋದರು. ಘಟನೆಗೆ ಸಂಬಂಧಪಟ್ಟಂತೆ ನಾನು ನ್ಯಾಯಾಲಯದಲ್ಲಿ ಹೇಳಿಕೆ ನೀಡಿರುತ್ತೇನೆ. ನ್ಯಾಯಾಧೀಶರ ಮುಂದೆ ನಾನು ನೀಡಿದ ಹೇಳಿಕೆ ನೋಡುತ್ತಿದ್ದು , ಅದನ್ನು ನಿಪಿ.18 ಎಂದು , ನನ್ನ ರುಜುವನ್ನು ನಿಪಿ.18(ಎ) ಎಂದು ಗುರುತಿಸಲಾಯಿತು. ಸದರಿ ಘಟನೆಯಲ್ಲಿ ಹಲ್ಲೆ ಮಾಡಿದ ವ್ಯಕ್ತಿಗಳು ವಿ ಸಿ ಮೂಲಕ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ.

<u>ಪಾಟೀಸವಾಲುಃ–</u> ಆರೊಪಿತರಪರ ಶ್ರೀ ಬಿ ಪಿವಕೀಲರಿಂದ.

ಓಪಿಡಿ ಮುಖ್ಯ ದ್ವಾರ ಮತ್ತು ಕ್ಯಾಸುಯಲ್ಟಿ ಮುಖ್ಯ ದ್ವಾರ ಬೇರೆಬೇರೆ ಇರುತ್ತವೆ. ಓಪಿಡಿಯಿಂದ ನೇರವಾಗಿ ಉತ್ತರ ದಿಕ್ಕಿಗೆ ಹೋದರೆ 300 ಅ ಡಿ ದೂರದಲ್ಲಿ ಹೆರಿಗೆ ವಾರ್ಡ್

ಬರುತ್ತದೆ. ಓಪಿಡಿ ಯಿಂದ 100 ಅಡಿ ದೂರದ್ಲಿ ಪೂರ್ವಕ್ಕೆ ಕ್ಯಾಸುವಲ್ಟಿ ವಾರ್ಡ್ ಬರುತ್ತದೆ. ಹೆರಿಗೆ ವಾರ್ಡ್ ನಲ್ಲಿ ನಾನು ಮತ್ತು ನನ್ನ ಜೊತೆ ಚಾಸಾ–23 ಅನುಸುಯಮ್ಮ ಇದ್ದರು. ಯಾರು ಯಾರಿಗೆ ಯಾವ ಯಾವ ವಾರ್ಡಿನಲ್ಲಿ ಕರ್ತವ್ಯಕ್ಕೆ ನೇಮಕ ಮಾಡುತ್ತಾರೋ ಅವರು ಅದೇ ವಾರ್ಡಿನಲ್ಲಿ ಕೆಲಸ ಮಾಡುತ್ತಿರುತ್ತಾರೆ. ಒಂದು ವಾರ್ಡಿನಿಂದ ಇನ್ನೊಂದು ವಾರ್ಡಿಗೆ ಹೋಗಲು ನಮ್ಮ ಮೇಲಾಧಿಕಾರಿಗಳ ಅನುಮತಿ ಬೇಕು ಎನ್ನುವುದು ನಿಜ. ಆ ಪ್ರಕಾರ ನಾನು ಮಾಹಿತಿ ನೀಡಿ ಬಂದಿರುತ್ತೇನೆ. ಆ ದಿನ ಚಾಸಾ–16 ವೈದ್ಯರು ಇದ್ದರು.

ಆಸ್ಪತ್ರೆಯಲ್ಲಿ ರಾತ್ರಿ ಸಮಯದಲಿಲ್ಲ ಕ್ಯಾಂಟೀನ್ ಹೋಟೆಲ್ ಇರುವುದಿಲ್ಲ. ನನ್ನ ಕೆಲಸ ಮುಗಿದ ನಂತರ ಕರ್ತವ್ಯದಲ್ಲಿದ್ದ ಚಾಸಾ–16 ವೈದರಿಗೆ ನಾನು ಹೇಳಿ ಕ್ಯಾಸುಯಲ್ಟಿಗೆ ಬಂದೆ. ಆ ಸಮಯದಲ್ಲಿ ಚಾಸಾ–16 ರವರು ಕ್ಯಾಸುಯಲ್ಟಿಯಲ್ಲಿದ್ದರು. ಹೆರಿಗೆ ವಾರ್ಡಿನಿಂದ ಕ್ಯಾಸುಯಲ್ಟಿಗೆ ಹೋಗುವ ಪೂರ್ವದಲ್ಲಿ ನಾನು ನಮ್ಮ ಮೇಲಾಧಿಕಾರಿಗೆ ಹೇಳಿಲ್ಲ ಎನ್ನುವುದು ಸರಿಯಲ್ಲ. ಆಗ ಸಮಯ ರಾತ್ರಿ 10–30 ಗಂಟೆಯಾಗಿತ್ತು. ನಾವು ಒಂದು ವಾರ್ಡಿನಿಂದ ಮತ್ತೊಂದು ವಾರ್ಡಿಗೆ ಹೋಗಬೇಕಾದರೆ ರಿಜಿಸ್ಟರ್ ನಲ್ಲಿ ನಮೂದು ಮಾಡಬೇಕು ಎನ್ನುವುದು ಸರಿಯಲ್ಲ. ನಾನು ಹೋಗುವಾಗ ನನ್ನ ಜೊತೆ ಚಾಸಾ–23 ಅನುಸುಯಮ್ಮ ಬರಲಿಲ್ಲ. ಸ್ವಲ್ಪ ಹೊತ್ತಿನ ನಂತರ ಬಂದರು. ಅನುಸುಯಮ್ಮ ಇವರು ನಾನು ಬಂದ ಹತ್ತು ನಿಮಿಷದ ನಂತರ ಬಂದರು.

ನಾನು ಹೋದ ಸಮಯಕ್ಕೆ 1 ನೇ ಆರೋಪಿ ರಾಜು ಇವರ ಎಂ ಎಲ್ ಸಿ ಮಾಡುತ್ತಿದ್ದರು. ಎಂ ಎಲ್ ಸಿ ಆಗುವ ಪೂರ್ವದಲ್ಲಿ ಓಪಿಡಿ ಮಾಡಿರಬೇಕು. ಆ ಸಮಯದಲ್ಲಿ ಓಪಿಡಿ ಕೌಂಟರ್ ನಲ್ಲಿ ಕವನಾ ಎನ್ನುವವರು ಇದ್ದರು. ಎರಡು ಕಡೆ ರೋಗಿಗಳಿಗೆ ಓಪಿಡಿ ರಸೀದಿ ಕೊಡಲಾಗಿತ್ತು.

1 ನೇ ಆರೋಪಿ ಆರೆಂಜ್ ಮತ್ತು ಬ್ಲ್ಯಾಕ್ ಕಲರ್ ಟೀ ಶರ್ಟ್ , ಕರಿ ಬಣ್ಣದ ಪ್ಯಾಂಟ್ ತೊಟ್ಟಿದ್ದರು. 2 ನೇ ಆರೋಪಿ ಲೈಟ್ ಬ್ಲ್ಯೂ ಕಲರ್ ಶರ್ಟ್ ಹಾಕಿದ್ದರು. ಮು.ಮಾ.4 ಶರ್ಟ್ ಹಳದಿ ಬಣ್ಣದ್ದು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದು ಆರೆಂಜ್ ಕಲರ್ ಎಂದು ಉತ್ತರಿಸಿರುತ್ತಾರೆ. ಮು.ಮಾ.4 ಹಳದಿ ಬಣ್ಣದು ಇದ್ದರು ಸಹ ನಾನು ಆರೆಂಜ್ ಕಲರ್ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಆ ದಿನ ಆಟೋ ಕ್ಯಾಸುಯಲ್ಟಿ ಓಪಿಡಿ ಗೆ ಬಂದು ನಿಂತು. ಮೂರು ಜನರಲ್ಲಿ

ಮೊದಲು ಕುಮಾರ ನಂತರ ಅವರ ಹೆಂಡತಿ ನಂತರ ಫಕ್ಕಿರಪ್ಪ ಬಂದರು. ನಾನು ನೋಡಿದ ರೀತಿಯಲ್ಲಿ ನಿಖರವಾಗಿ ವೈದ್ಯಾಧಿಕಾರಿಗಳ ಕೊಠಡಿ ಮತ್ತು ಸ್ಟಾಫ್ ನರ್ಸ್ ರವರ ಕೊಠಡಿ ಮಧ್ಯ ಇರುವ ಪ್ಯಾಸೆಜ್ ನಲ್ಲಿ ಗಲಾಟೆ ಆಯಿತು. ನಾನು ಬಂದ ಸಮಯದಲ್ಲಿ ಕ್ಯಾಸುಯಲ್ಟಿ ಯಲ್ಲಿ ಸ್ಟಾಫ್ ನರ್ಸ್ ಪದ್ಮಜಾ ಇದ್ದರು. ವೈದ್ಯರಿಗೆ ಎಂ ಎಲ್ ಸಿ ಬರೆಯಲು ವಿರೇಂದ್ರ ಸಹಾಯ ಮಾಡುತ್ತಿದ್ದರು.

ಕ್ಯಾಸುಯಲ್ಟಿ ವಾರ್ಡ್ , ಪ್ಯಾಸೇಜ್ , ವೈದ್ಯರ ಕೊಠಡಿ , ಎಲ್ಲಾ ಕಡೆಯಲ್ಲು ಸಹ ಸಿಸಿ ಟಿವಿ ಕ್ಯಾಮರಾ ಅಳವಡಿಸಿದ್ದಾರೆ ಎನ್ನುವುದು ನಿಜ.

ಹೆರಿಗೆ ವಾರ್ಡಿನಲ್ಲಿ ರೋಗಿ ಜೊತೆ ಬಂದ ಸಹಾಯಕರಿಗೆ ಊಟ ಮಾಡಲು, ಕುಳಿತುಕೊಳ್ಳಲು ಪ್ರತ್ಯೇಕ ಕೊಠಡಿ ಇದೆ ಎನ್ನುವುದು ಸುಳ್ಳು. ಕ್ಯಾಸುಯಲ್ಟಿ ವಾರ್ಡಿನಲ್ಲಿ ಊಟ ಮಾಡಲು ವ್ಯವಸ್ಥೆ ಇರುವುದಿಲ್ಲ. ನಾನು ಬಂದ ಸಮಯದಿಂದ ಐದರಿಂದ ಹತ್ತು ನಿಮಿಷದಲ್ಲಿ ಎಂ ಎಲ್ ಸಿ ಮಾಡಿರುತ್ತಾರೆ. ಆ ದಿನ ಬಂದ ಆಟೋ ನಂಬರ್ ನನಗೆ ಗೊತ್ತಿಲ್ಲ. ಆಟೋ ಚಾಲಕ ಆಸ್ಪತ್ರೆಯ ಒಳಗೆ ಬರಲಿಲ್ಲ. ಸದರಿ ಬಂದ ಆಟೋ ಸ್ಥಳದಲ್ಲಿ ಎಷ್ಟು ನಿಮಿಷ ಇತ್ತು ಎಂಬುದನ್ನು ನಾನು ನೋಡಿಲ್ಲ. ಎಂ ಎಲ್ ಸಿ ಮಾಡಿಸುವ ಸಮಯದಲ್ಲಿ ಆಟೋ ಬಂತು.

ನಿಪಿ.18 ರ ಹೇಳಿಕೆ ಕೊಡುವಾಗ ಯಾವ ವ್ಯಕ್ತಿಗಳ ಹೆಸರನ್ನು ಹೇಳಿರುವುದಿಲ್ಲ ಎನ್ನುವುದು ನಿಜ. 1 ನೇ ಆರೋಪಿ ಚಾಕುವಿನಿಂದ ಕುಮಾರನ ಕುತ್ತಿಗೆಗೆ ಹಾಕಿದ ಎಂದು ನಾನು ನಿಪಿ.18 ಹೇಳಿಕೆ ನೀಡುವಾಗ ಹೇಳಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಪ್ರಕಾರ ಗಾಲಾಟೆ ಯಾವ ರೀತಿ ಆಯಿತು ಎನ್ನುವ ವಿಷಯವನ್ನು ನಿಪಿ.18 ಹೇಳಿಕೆ ನೀಡುವಾಗ ಹೇಳಿಲ್ಲ. ಗಲಾಟೆಯಾಗಿದೆ ಎಂದು ಹೇಳು ವ ಸಮಯದಲ್ಲಿ ನಮ್ಮ ಆಸ್ಪತ್ರೆಯ ಸಿಬ್ಬಂದಿಯನ್ನು ಹೊರತುಪಡಿಸಿ ಬೇರೆಯವರು ಸುಮಾರು 20 ಜನ ಇರಬಹುದು. ಅಲ್ಲಿರುವ ಜನರು ಗಲಾಟೆ ಬಿಡಿಸುವ ಪ್ರಯತ್ನ ಮಾಡಿದರು. ನಾವು ಗಾಭರಿಯಾಗಿದ್ದರಿಂದ ಗಲಾಟೆ ಬಿಡಿಸುವ ಪ್ರಯತ್ನ ಮಾಡಲಿಲ್ಲ.

ಚಾ.ಸಾ-16 ವೈದ್ಯಾಧಿಕಾರಿಗಳ ಆದೇಶದ ಮೇರೆಗೆ ನಾನು ಪ್ರಾಥಮಿಕ ಚಿಕಿತ್ಸೆ ನೀಡಿರುತ್ತೇನೆ. ನಾನು ಪ್ರಾಥಮಿಕ ಚಿಕಿತ್ಸೆ ನೀಡಿದ್ದರ ಬಗ್ಗೆ ದಾವಣಗೆರೆ ಸಿ ಜಿ ಆಸ್ಪತ್ರೆಗೆ ಕಳುಹಿಸುವಾಗ ಓಪಿಡಿ ರಸೀದಿ ಕಳುಹಿಸಿಕೊಟ್ಟಿರುವುದಿಲ್ಲ. ರೋಗಿಯನ್ನು ಅಂಬುಲನ್ಸ

ಮೂಲಕ ಕಳುಹಿಸಿಕೊಟ್ಟಾಗ ನಮ್ಮ ಆಸ್ಪತ್ರೆಯಿಂದ ಯಾವುದೇ ದಾಖಲೆಗಳನ್ನು ಕಳುಹಿಸಿಕೊಟ್ಟಿಲ್ಲ.

ಆ ದಿನ ರಾತ್ರಿ 11–15 ಗಂಟೆಗೆ ಪೊಲೀಸರು ಆಸ್ಪತ್ರೆಗೆ ಬಂದಿರಬಹುದು. ಆಗ ಪೊಲೀಸರು ಚಾಸಾ–16 ವೈದ್ಯರ ಹೇಳಿಕೆ ಪಡೆದುಕೊಂಡರು. ಆ ಸಮಯದಲ್ಲಿ ಆರೋಪಿ 1 ಮತ್ತು 2 ಓಪಿಡಿ.ಯಲ್ಲಿದ್ದರು. ಆಗ ಪೊಲೀಸರು ಆರೋಪಿತರನ್ನು ಕರೆದುಕೊಂಡು ಹೋದರು. ಪೊಲೀಸರು ಅಲ್ಲಿ ಬಿದ್ದಿದ್ದ ಮಾದರಿ ರಕ್ತ , ಕಮಾರನ ಚಪ್ಪಲಿ ತೆಗೆದುಕೊಂಡು ಹೋದರು. ಪೊಲೀಸರು ಸ್ಥಳದಲ್ಲಿ ಬರವಣಿ ಮಾಡಿ, ನನ್ನ ಸಹಿ ಪಡೆದಿರುವುದಿಲ್ಲ. ಪೊಲೀಸರು ಯಾರ ಸಹಿ ಪಡೆದಿದ್ದಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ.

ನಾನು ಆ ದಿನ ಹೆರಿಗೆ ವಾರ್ಡಿನಲ್ಲಿ ಕೆಲಸ ಮಾಡುತ್ತಿದ್ದೆ , ಮುಗಿಸಿಕೊಂಡು ಕ್ಯಾಸುಯಲ್ಟಿ ವಾರ್ಡಿಗೆ ಬಂದೆ , ಗಲಾಟೆಯಾಗಿದೆ ಎಂದು ಹೇಳಿದ ವಿಷಯ ಸಹ ಸಿಸಿ ಟಿ.ವಿ. ದೃಷ್ಯಾವಳಿ ನಮೂದು ಆಗಿರುತ್ತದೆ. ಆ ದಿನ ಹೆರಿಗೆ ವಾರ್ಡಿನಲ್ಲಿ ಕೆಲಸ ಮಾಡುತ್ತಿದ್ದೆ ವಿನಹ ಅಲ್ಲಿಂದ ಕ್ಯಾಸುಯಲ್ಲಿಟಿಗೆ ಬಂದಿಲ್ಲ ಎನ್ನುವುದು ಸುಳ್ಳು . ನಾನು ಬಂದಾಗ ಎಂ ಎಲ್ ಸಿ ಮಾಡಿಸುತ್ತಿದ್ದರು , ಆಗ ಆಟೋ ಬಂತು , ಅದರಲ್ಲಿ ಮೂರು ಜನರು ಬಂದರು, ಆ ಸಮಯದಲ್ಲಿ ಗಲಾಟೆಯಾಯಿತು ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪೊಲೀಸರು ಆಸ್ಪತ್ರೆಗೆ ಬಂದ ಸಮಯದಲ್ಲಿ 1 ನೇಆರೋಪಿಯದು ಮಾತ್ರ ಓ ಪಿ ಡಿ ಆಗಿತ್ತು. 2 ನೇ ಆರೋಪಿಯದು ಆಗಿರಲಿಲ್ಲ. ಪೊಲೀಸರು ಬಂದ ನಂತರ 2 ನೇ ಆರೋಪಿಯ ಎಂ ಎಲ್ ಸಿ ಮಾಡಿಸಲಾಯಿತು.

ಪೊಲೀಸರು ಆಸ್ಪತ್ರೆಗೆ ಬಂದರು , ಬರವಣಿಗೆ ಮಾಡಿಕೊಂಡು , ಚಪ್ಪಲಿ ತೆಗೆದುಕೊಂಡು ಹೋಗಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸುಳ್ಳು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಪ್ರಕಾರ ನಾನು ಯಾವುದೇ ಘಟನೆ ನೋಡಿಲ್ಲದಿದ್ದರೂ ಸಹ ಪೊಲೀಸರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಆರೋಪಿತರ ಮತ್ತು ಗಾಯಾಳುಗಳ ಮಧ್ಯ ಯಾವ ಆಸ್ತಿಗೆ ಸಂಬಧಪಟ್ಟ ವ್ಯಾಜ್ಯ ಇತ್ತು ಎನ್ನುವುದು ನನಗೆ ಗೊತ್ತಿಲ್ಲ. ಆಸ್ತಿ ವಿಚಾರಕ್ಕೆ ಸಂಬಂಧಪಟ್ಟಂತೆ ಗಲಾಟೆಯಾಯಿತು

ಎಂದು ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅಂಬುಲನ್ಸ ಮುಖಾಂತರ ಕಳುಹಿಸಿದ ನಮ್ಮ ಸಿಬ್ಬಂದಿಗಳು ಯಾಕೆ ಈ ರೀತಿ ಗಲಾಟೆಯಾಯಿತು ಎಂದು ವಿಚಾರಿಸಿದಾಗ ಆಸ್ತಿ ವಿಚಾರವಾಗಿ ಗಲಾಟೆಯಾಗಿದೆ ಎಂದು ಅವರು ತಿಳಿಸಿದ ಆಧಾರದ ಮೇಲೆ ನಾನು ಹೇಳುತ್ತಿದೇನೆ. ಈ ವಿಚಾರವನ್ನುನಾನು ನಿಪಿ.18 ರಲ್ಲಾಗಲಿ , ಪೊಲೀಸರ ಮುಂದಾಗಲಿ ಹೇಳಿರುವುದಿಲ್ಲ. ಈ ಕೇಸಿನ ಬಗ್ಗೆ ನನಗೆ ಏನೂ ಗೊತ್ತಿಲ್ಲದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಯಾವುದೇ ಘಟನೆ ನೋಡಿಲ್ಲ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ</u>– ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/–

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.